ಅ) *ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆಯಲ್ಲಿ ನಿರತವಾಗಿರುವಾಗ ಆಪತ್ತು ಒದಗಿ ಬಂದಾಗ ಅಥವಾ ಅವರ ಮೀನುಗಾರಿಕಾ ಯಾಂತ್ರಿಕ ದೋಣಿಗಳು ಹಾಳಾದಾಗ ರಕ್ಷಣಾ ಕಾರ್ಯಕ್ರಮಕ್ಕಾಗಿ ಸರ್ಕಾರವು ಯಾವ ಕಾರ್ಯಕ್ರಮಗಳನ್ನು ಅಳವಡಿಸಿರುತ್ತದೆ?*

ಆ) *ಈ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ಯಾವ ಇಲಾಖೆಗೆ ನಿರ್ವಹಿಸಲಾಗಿದೆ?*

ಇ) *ಕಳೆದ 2 ವರ್ಷಗಳಲ್ಲಿ ಮೀನುಗಾರಿಕೆಯಲ್ಲಿ ಅಪಘಾತವಾದಾಗ ಸರ್ಕಾರ ಏನು ಪರಿಹಾರ ನೀಡಿದೆ, ಹಾಗೂ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಇಂತಹ ಪ್ರಕರಣಗಳಲ್ಲಿ ಪೋಲೀಸ್, ಕರಾವಳಿ ಕಾವಲು ಪಡೆ ಬಂದರು ಇಲಾಖೆಗಳ ಮತ್ತು ನೌಕಾ ದಳದವರ ಸಹಾಯ ಪಡೆಯಲಾಗುತ್ತಿದೆ.

ಆ) ಪೋಲೀಸ್, ಮೀನುಗಾರಿಕೆ ಮತ್ತು ಬಂದರು ಇಲಾಖೆಗಳು ಇಂಥಹ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿವೆ.

ಇ) ಮೀನುಗಾರಿಕೆಯಲ್ಲಿ ಉಂಟಾಗುವ ಅಪಘಾತಗಳಿಂದ ಸಂತ್ರಸ್ತರಾದ 152 ಸಂತ್ರಸ್ತರಿಗೆ ಕಳೆದ 2 ವರ್ಷಗಳಲ್ಲಿ ಒಟ್ಟು 13,91,000-00 ರೂ.ಗಳ ಪರಿಹಾರವನ್ನು ಇಲಾಖೆಯ ಈ ಕೆಳಕಂಡ ಯೋಜನೆಗಳಡಿಯಲ್ಲಿ ನೀಡಲಾಗಿದೆ.

1) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆ.

2) ಮೀನುಗಾರರ ಸಂಕಷ್ಟ ಪರಿಹಾರ ನಿಧಿ.

3) ಮೀನುಗಾರರಿಗೆ ಸಾಮೂಹಿಕ ಜೀವ ವಿಮಾ ಸೌಲಭ್ಯ. ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆ.

ತುಮಕೂರು ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು

1671 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು (ಹಾಗೂ ಜಿಲ್ಲಾವಾರು ಬಿಡುಗಡೆಯಾದ ಅನುದಾನ ಎಷ್ಟು)*

ಆ) *ಈ ಯೋಜನೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ನಬಾರ್ಡ್ ಸಂಸ್ಥೆಯ ನಿಬಂಧನೆಗಳೇನು?*

ಇ) *ನಿಬಂಧನೆಗಳನ್ನು ಪಾಲಿಸದೆ ಕಾಮಗಾರಿಗಳನ್ನು ಕೈಗೊಂಡಿರುವುದು ಸರ್ಕಾರಕ್ಕೆ (ತಿಳಿದಿದೆಯೇ)?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕಾಮಗಾರಿಗಳ ಪಟ್ಟಿ ಅನುಬಂಧ-1 ರಲ್ಲಿ ಸಲ್ಲಿಸಿದೆ. ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಅಂದಾಜಿನ ಶೇ 10 ರಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಭರಿಸಬೇಕು. ಪ್ರಸ್ತಾವಿತ ಕಾಮಗಾರಿಗಳು ಗ್ರಾಮೀಣ ಅಭಿವೃದ್ಧಿಯ ಹಿನ್ನಲೆ ಇರಬೇಕು.

ಇ) ಯಾವುದೂ ಇರುವುದಿಲ್ಲ.

ಪ್ರವಾಸೋದ್ಯಮ ಅಧೀನದಲ್ಲಿ ಹೋಟೆಲ್ ನಡೆಸುವವರಿಗೆ ಸಬ್ಸಿಡಿಯ ಔಚಿತ್ಯ

1672 - ಡಾ||ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಹೋಟೆಲ್ ಸ್ಥಾಪಿಸ ಬಯಸುವ ಕೋಟ್ಯಾಧೀಶರಿಗೆ ಸಬ್ಸಿಡಿ ಕೊಡುವುದರ ಔಚಿತ್ಯವೇನು.

ಆ) ಈ ಸಬ್ಸಿಡಿಗೆ ಒದಗಿಸುವ ಹಣವನ್ನು ಮೂಲಭೂತ ಸೌಕರ್ಯಗಳಾದ ಉತ್ತಮ ರಸ್ತೆ, ಸಾರಿಗೆ ವ್ಯವಸ್ಥೆ ಮುಂತಾದವುಗಳಿಗಾಗಿ ಖರ್ಚು ಮಾಡಿದರೆ ಹೆಚ್ಚಿನ ಪ್ರಯೋಜನವಾಗುವುದಿಲ್ಲವೇ?

ಇ) ಹೀಗೆ ಹೋಟೆಲುಗಳನ್ನು ಸ್ಥಾಪಿಸುವವರಿಗೆ ಭೂಮಿ, ನೀರು, ವಿದ್ಯುತ್ ಮುಂತಾದ ಸೌಕರ್ಯವನ್ನು ಸುಲಭವಾಗಿ ಒದಗಿಸಿದಲ್ಲಿ, ಪ್ರವಾಸೋದ್ಯಮವು ಬೇಗನೇ ಅಭಿವೃದ್ಧಿಯಾಗುವುದಿಲ್ಲವೇ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರವೇ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಿಲ್ಲ. ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಖಾಸಗಿ ವಲಯ ಭಾಗವಹಿಸುವಂತೆ ಮಾಡುವುದು ಸರ್ಕಾರದ ನೀತಿಯಾಗಿದೆ. ಆದ್ದರಿಂದ ಪರಿಷ್ಕೃತ ಪ್ರವಾಸೋದ್ಯಮ ನೀತಿಯಲ್ಲಿ ಕೆಲವು ಉತ್ತೇಜನ ಮತ್ತು ರಿಯಾಯಿತಿಯನ್ನು ನೀಡಲಾಗಿದೆ.

ಆ) ರಸ್ತೆ ಮತ್ತು ಸಾರಿಗೆ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಇತರೇ ಇಲಾಖೆಯ ಜವಾಬ್ದಾರಿಯಾಗಿದೆ. ಆದ್ದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಉತ್ತೇಜನ ಮತ್ತು ರಿಯಾಯಿತಿಗಳನ್ನು ಪ್ರವಾಸೋದ್ಯಮ ಇಲಾಖೆಯು ನೀಡುತ್ತಿದೆ.

ಇ) ಪರಿಷ್ಕೃತ ಪ್ರವಾಸೋದ್ಯಮ ನೀತಿಯನ್ವಯ ಹೋಟೆಲ್ ಉದ್ದಿಮೆದಾರರು ಸ್ಟಾಂಪ್ ಡ್ಯೂಟಿಯಲ್ಲಿ ವಿನಾಯ್ತಿ, ಸೊಂದಣಿ ಶುಲ್ಕದಲ್ಲಿ ರಿಯಾಯಿತಿ, ಮತ್ತು ಕೈಗಾರಿಕಾ ದರದಲ್ಲಿ ವಿದ್ಯುಚ್ಛಕ್ತಿ ಶುಲ್ಕವನ್ನು ಪಾವತಿಸಲು ಅರ್ಹರಾಗಿರುತ್ತಾರೆ.